

# ನಾನೂ ತಾರೆ ಆದರೆ

ಮೇಲೆ ನೋಡು ಬಾನಿನಲ್ಲಿ
ಹೊಳೆವ ಚೆಂದ ತಾರೆಯ
ಫಳ ಫಳ ಮಿನುಗುತಾವ
ಕೈಯ ಹಾಕಿ ಬಾಚುವ..!

ಎಷ್ಟು ತಾರೆ ಬಾನಿನಲ್ಲಿ
ಬಾರೊ ಎಣಿಸಿ ನೋಡುವ
ಒಂದು ಎರಡು ಮೂರು ನಾಲ್ಕು
ಎಂದು ಲೆಕ್ಕ ಮಾಡುವ..!

ಇಷ್ಟು ಹೊಳೆವ ತಾರೆಯನ್ನು
ಅಲ್ಲಿ ಯಾರು ಇಟ್ಟರೋ..?
ಬೆಳ್ಳಿಯಂತೆ ಮಿನುಗೋ ಹೊಳಪ
ಅದಕೆ ಯಾರು ಕೊಟ್ಟರೋ..?

ಎಷ್ಟು ಚೆಂದ ನಾನು ಕೂಡ
ಬೆಳ್ಳಿ ತಾರೆಯಾದರೆ..?!
ಕತ್ತಲಲ್ಲಿ ಬೆಳಕ ಸೂಸಿ
ಬಾನಿನಲ್ಲಿ ಹೋದರೆ..?!

ಮೇಲೆ ನೋಡು ಬಾನಿನಲ್ಲಿ
ಹೊಳೆವ ಚೆಂದ ತಾರೆಯ
ಫಳ ಫಳ ಮಿನುಗುತಾವ
ಕೈಯ ಹಾಕಿ ಬಾಚುವ..!

■ **ಆರ್. ಸುನೀಲ್**
**ತರೀಕೆರೆ**
ಕಲೆ: ಸಂತೋಷ್ ಸಸಿಹಿತ್ಲು



ಹಸುವಿಗೆ ತೊಂದರೆ ನೀಡಿದ್ದೇ ಆದರೆ ನಿನ್ನನ್ನು ತಿಂದು ಮುಗಿಸಿಬಿಡುವೆ' ಎಂದು ಕೋಪದಿಂದ ಒಂದೇ ಸಮನೆ ಬೊಗಳಿದ್ದರಿಂದ ಇಷ್ಟುದಿನ ಗರ್ವದಿಂದ ಮೆರೆಯುತ್ತ ಹಸುವನ್ನು ಹಿಂಸಿಸುತ್ತಿದ್ದ ಹುಂಜ ಭಯಗೊಂಡು ನಾಯಿಯ ಮಾತುಗಳನ್ನು ಕೇಳಿ ನಿಂತಲ್ಲೆ ನಡುಗಿತು.

ಹಸುವಿಗೆ ಇನ್ನು ಮುಂದೆ ತೊಂದರೆ ಕೊಟ್ಟರೆ ತನಗೆ ಉಳಿಗಾಲವಿಲ್ಲ ಎಂದು ಅಂದುಕೊಂಡ ಹುಂಜ, ನಾಯಿಯ ಬುದ್ಧಿ ಮಾತುಗಳಿಂದ ತನ್ನ ತಪ್ಪನ್ನು ತಿದ್ದಿಕೊಳ್ಳುವಂತಾಯಿತು.

ಮೌನ ದೌರ್ಬಲ್ಯವಾಗಿರುವುದಿಲ್ಲ. ಸಮಾಜದಲ್ಲಿ ಯಾರೂ ತುಚ್ಛರಲ್ಲ. ನಾವೇ ಬುದ್ಧಿವಂತರು ಅಂದುಕೊಂಡರೆ ನಮ್ಮಷ್ಟು ದಡ್ಡರು ಮತ್ತೊಬ್ಬರಿಲ್ಲ. ನಾವೇ ಎಂದು ಮೆರೆದರೆ ನಮಗಿಂತ ಬಲಿಷ್ಠರು ಇನ್ನೊಬ್ಬರಿರುತ್ತಾರೆ. ಮತ್ತೊಬ್ಬರನ್ನು ಸ್ನೇಹ ಗೌರವಗಳಿಂದ ಕಂಡರೆ ನಾವೂ ನೆಮ್ಮದಿಯಿಂದ ಚೆನ್ನಾಗಿ ಬಾಳಬಹುದು ಎಂಬ ಸತ್ಯ ಆ ಹುಂಜಕ್ಕೆ ಗೊತ್ತಾಗಿ ಮುಂದಿನ ದಿನಗಳಲ್ಲಿ ಹುಂಜ, ನಾಯಿ ಮತ್ತು ಹಸು ಒಂದೇ ಕೊಟ್ಟಿಗೆಯಲ್ಲಿ ಸ್ನೇಹದಿಂದ ಬಾಳಲಾರಂಭಿಸಿದವು. ■

## ಕುಂಚ ಪ್ರಪಂಚ



**ನಿಹಾರಿಕಾ ಗೌಡ**
4ನೇ ತರಗತಿ,
ಎಕ್ಸೆಲ್ ಪಬ್ಲಿಕ್ ಸ್ಕೂಲ್,
ಮೈಸೂರು

